# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಹೊರಮಾವು ಉಪ ವಲಯ,**

**ಮಹದೇವಪುರ ವಲಯ ಬೆಂಗಳೂರು-43.**

ಸಂಖ್ಯೆ.ಬಿಬಿಎಂಪಿ/ಸಕಂಅಹೊಉವ/(ಸಿಬ್ಬಂದಿ)ಪಿಆರ್/21/2022-23 ದಿನಾಂಕ: 01/10/2022

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-01/10/2022 ರಂದು ಹೊರಮಾವು ಉಪ-ವಿಭಾಗದ ರಾಮಮೂರ್ತಿನಗರ ವಾರ್ಡ್-84ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ | ಮೊ.ನಂ |
|---|---|---|---|
| 1 | ಶ್ರೀ.ಬಸವರಾಜ್ ಚಾರಿ | ನೋಡಲ್ ಅಧಿಕಾರಿ ವಾರ್ಡ್ ನಂ-84 | |
| 2 | ಶ್ರೀ. ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | 9844587466 |
| 3 | ಶ್ರೀ. ದೊಡ್ಡ ಶಾಮಚಾರಿ | ಸಹಾಯಕ ಕಂದಾಯ ಅಧಿಕಾರಿ | 9480685868 |
| 4 | ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ | ಸಹಾಯಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿ ವಾರ್ಡ್ ನಂ-84 | 9739838297 |
| 5 | ಶ್ರೀ. ವಿಶ್ವನಾಥ್, | ಆರೋಗ್ಯ ಅಧಿಕಾರಿಗಳು, ವಾರ್ಡ್ ಸಂಖ್ಯೆ.84, | 9916609413 |
| 6 | ಶ್ರೀ ವೀರೇಶ್ | ಬೆಸ್ಕಾಂ ಕಿರಿಯ ಅಭಿಯಂತರರು | 9449869317 |
| 7 | ಶ್ರೀ ಆನಂದ | ಬಿ.ಡ್ಲ್ಯೂ.ಡ್ಲ್ಯೂ.ಎಸ್.ಎಸ್.ಬಿ ಕಿರಿಯ ಅಭಿಯಂತರರು | 7090216187 |
| 8 | ಶ್ರೀ. ಚಂದ್ರಕಲಾ | ಕಿರಿಯ ಆರೋಗ್ಯ ಪರಿವೀಕ್ಷಕರು | 9620101648 |
| | | ಸಾರ್ವಜನಿಕರು | |
| 9 | ಶ್ರೀ.ನಂಜಪ್ಪ | ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - |
| 10 | ಉಷಾ | ಆದಿತ್ಯ ಬಡಾವಣೆ | - |
| 11 | ಆರ್‌ಮುಗಮ್ಮ್ | ಸರ್.ಎಂ.ವಿ ನಗರ | - |
| 12 | ಅರವಿಂದ್ | ಬೋವಿ ಕಾಲೋನಿ | - |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.84 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

ನಂಜಪ್ಪ ಸರ್.ಎಂ.ವಿ ನಗರ ಬಡಾವಣೆ :- ರವರು ಮಾತನಾಡಿ, 5ನೇ ಮುಖ್ಯರಸ್ತೆ, ಎ ಕ್ರಾಸ್, ಸರ್.ಎಂ.ವಿ ನಗರ ಇಲ್ಲಿ ಬೀದಿ ದೀಪ/ ವಿದ್ಯುತ್ ಕಂಬಗಳ ಸ್ವಿಚ್‌ಗಳು ದುರಸ್ಥಿಯಾಗಿದ್ದು, ದುರಸ್ತಿಯನ್ನು ಸರಿಪಡಿಸಿ ಕೊಡಲು ಮತ್ತು ನೀರಿನ ಸಮಸ್ಯೆ ಹಾಗೂ ಖಾಲಿ ನಿವೇಶನಗಳಲ್ಲಿ ಕಸಗಳನ್ನು ತುಂಬಿರುತ್ತಾರೆ.

ಕ್ರಮ:- ಬೀದಿ ದೀಪಗಳ ನಿರ್ವಹಣೆ ಅಧಿಕಾರಿಗಳಾದ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ರವರು ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಅರವಿಂದ್ ಬೋವಿ ಕಾಲೋನಿ ನಿವಾಸಿ ರವರು ಮಾತನಾಡಿ ರಸ್ತೆಯ ಕೆಲಸವು ಪ್ರಗತಿಯಲ್ಲಿದ್ದು ರಸ್ತೆಯನ್ನು ಅತಿ ಶೀಘ್ರದಲ್ಲಿ ಮಾಡಬೇಕೆಂದು ಸಬೆಯಲ್ಲಿ ತಿಳಿಸಿದರು.

ಕ್ರಮ:- ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2) ಬಡಾವಣೆ ಮುಖ್ಯ ರಸ್ತೆಯಲ್ಲಿ, ಬೀದಿ ದೀಪಗಳು ಇಲ್ಲದೆ ಇರುವುದರಿಂದ ರಾತ್ರಿ ಸಮಯದಲ್ಲಿ ಓಡಾಡಲು ಕಷ್ಟಕರವಾದ್ದರಿಂದ ಕೂಡಲೇ ಬೀದಿ ದೀಪಗಳನ್ನು ಅಳವಡಿಸುವುದಾಗಿ ಸಬೆಯಲ್ಲಿ ತಿಳಿಸಿದರು.

ಕ್ರಮ:- ಬೀದಿ ದೀಪಕ್ಕೆ ಸಂಬಂದಪಟ್ಟವರು ಸಬೆಗೆ ಗೈರಾಜಾಗಿದ್ದರಿಂದ, ಸಹಾಯಕ ಅಭಿಯಂತರರಾದ ಶ್ರೀ. ವಿಕ್ರಮ್ ಸಜ್ಜನ್ ಶೆಟ್ಟಿ ರವರು ಅಗತ್ಯ ಕ್ರಮವಹಿಸಲು ತಿಳಿಸುವುದಾಗಿ ಸಭೆಯು ಸೂಚಿಸಿತು

ಆರ್ಮುಗ ಸರ್.ಎಂ.ವಿ ನಗರ ಬಡಾವಣೆ :- ರವರು ಮಾತನಾಡಿ 1ನೇ ಮುಖ್ಯ ರಸ್ತೆ ಸರ್.ಎಂ.ವಿ ನಗರ ಚರಂಡಿಯ ಮೇಲೆ ಸ್ಲಾಬ್‌ಗಳನ್ನು ಅಳವಡಿಸಬೆಕೆಂದು ಸಬೆಯಲ್ಲಿ ತಿಳಿಸಿದರು. ಹಾಗೂ 6ನೇ ರಸ್ತೆಯಲ್ಲಿ ಚರಂಡಿಗಳ ಹೂಳನ್ನು ತೆಗೆಸಿಕೊಡಬೆಕೆಂದು ಸಬೆಯಲ್ಲಿ ತಿಳಿಸಿದರು.

ಕ್ರಮ:- ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ದಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ. ದೊಡ್ಡ ಶಾಮಚಾರಿ
ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ-84
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ
ಸಹಾಯಕ ಅಭಿಯಂತರರು
ರಾಮಮೂರ್ತಿನಗರ ವಾರ್ಡ್
ಸಂಖ್ಯೆ-84
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1.ಕೌನ್ಸಿಲ್ ಕಾರ್ಯದರ್ಶಿ ರವರ ಆವಗಾಹನೆಗೆ ಮಂಡಿಸಲಾಗಿದೆ.